ಮೂಲ ದಾವಾ ಸಂಖ್ಯೆ. 179/2016 ಡಿ ಡಬ್ಲ್ಯೂ 3

(ದಿನಾಂಕ 30-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ನನಗೆ ವಾದಿ ಮತ್ತು ಪ್ರತಿವಾದಿ ಗೊತ್ತು. ನನ್ನ ಖುದ್ದೂರು ಕಡಲಬಾಳು ಗ್ರಾಮ. ವಾದಿಯ ಮನೆಯ ವಿಚಾರ ನನಗೆ ಸಂಪೂರ್ಣ ಗೊತ್ತು. ವಾದಿಯ ಮನೆತನಕ್ಕೆ ಎಷ್ಟು ಆಸ್ತಿಗಳಿವೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರವನ್ನು ನಾನೇ ಹೇಳಿ ಬರೆಸಿದ್ದೇನೆ. ಕಡ್ಲವ್ವಇವರು ಸನ್ 1971 ರಂದು ಹನುಮಕ್ಕ ಇವರ ಕಡೆಯಿಂದ ಮನೆ ಪ್ಲಾಟನ್ನು ಖರೀದಿಸಿದ್ದಾರೆ. ಅದರ ನಂಬರ್ ನನಗೆ ಗೊತ್ತಿಲ್ಲ. ಅದರ ಚಕ್ಕುಬಂದಿ ಪೂಃ ತೋಟಮ್ಮ ಇವರ ಬಯಲು ಜಾಗ, ಪಃ ಕೊಟ್ರಗೌಡ ಇವರ ಬಯಲು ಜಾಗ, ಉಃಗಿರಿಯಮ್ಮ ಇವರ ಜಮೀನು ಹಾಗೂ ದಃ ಪಂಪಣ್ಣ ಇವರ ಜಮೀನು ಬರುತ್ತದೆ. ಸದರಿ ಖರೀದಿ ಸಮಯದಲ್ಲಿ ನಾನು ಹಾಜರಿರಲಿಲ್ಲ. ಖರೀದಿ ಮಾಡಿರುವಂತಹ ಪ್ಲಾಟಿನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಪ್ಲಾಟಿನಲ್ಲಿ ಯಾವ ದಿಕ್ಕಿನ ಕಡೆಗೆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಕಡ್ಲಮ್ಮ ಇವರು ಖರೀದಿಸಿದ ಪ್ಲಾಟು ಮೂಲತಃ ಹನುಮಕ್ಕ ಇವರಿಗೆ ಸೇರಿದ್ದು ಇರುತ್ತದೆ. ಸದರಿ ಆಸ್ತಿಯು ಮೂಲತಃ ಹನುಮಕ್ಕ ಇವರ ಅಜ್ಜಿ ವೆಂಕಟಭೀಮವ್ವ ಇವರಿಗೆ ಸೇರಿತ್ತು ಎಂದರೆ ಸರಿ. ವೆಂಕಟಭೀಮವ್ವ ಇವರಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ವೆಂಕಟಭೀಮವ್ವ ಇವರಿಗೆ ಲಕ್ಷ್ಮವ್ವ, ಸೀತವ್ವ, ಗಿರಿಯಮ್ಮ ಮತ್ತು ವೆಂಕವ್ವ ಎಂಬ 4 ಜನ ಮಕ್ಕಳು ಇದ್ದರೆಂದರೆ ಸರಿ. ಹನುಮಕ್ಕ ಇವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಹನುಮಕ್ಕ ಇವರ ತಾಯಿಯ ಹೆಸರು ಲಕ್ಷ್ಮವ್ವ ಎಂದರೆ ಸರಿ.

ಈ ದಾವೆಯ ಪ್ರತಿವಾದಿ ಕಡ್ಲೆಮ್ಮ ಇವರಿಗೆ ಮೊಮ್ಮಗ ಎಂದರೆ ಸಾಕ್ಷಿಯು ಮಗನ ಮಗ. ಕಡ್ಲೆಮ್ಮ ಖರೀದಿಸಿದ ಆಸ್ತಿಯ ಖರೀದಿ ಪತ್ರ ನಾನು ನೋಡಿದ್ದೇನೆ. ಹನುಮಕ್ಕ ಇವರು ಕಡ್ಲೆಮ್ಮ ಇವರಿಗೆ ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲವೆಂದರೆ ಸರಿಯಲ್ಲ. ರುದ್ರಪ್ಪ, ಕೊಟ್ರಯ್ಯ ಮತ್ತು ಪ್ರತಿವಾದಿ ಅಜ್ಜಿಯು ಯಾರ ಕಡೆಯಿಂದ ಆಸ್ತಿಯನ್ನು ಖರೀದಿಸಿದ್ದಾರೆಂದರೆ ಸಾಕ್ಷಿಯು ಹನುಮಕ್ಕ ಇವರ ಕಡೆಯಿಂದ ಖರೀದಿಸಿದ್ದಾರೆನ್ನುತ್ತಾರೆ. ವಂಟಗೋಡಿ ರುದ್ರಪ್ಪ ಮತ್ತು ಅಂಗಡಿ ಕೊಟ್ರಯ್ಯ ಯಾವ ಸರ್ವೆ ನಂಬರಿನಲ್ಲಿ ಆಸ್ತಿ ಖರೀದಿಸಿದ್ದಾರೆಂದು ನನಗೆ ಗೊತ್ತಿಲ್ಲ. ಅವರು ಪೂರ್ವ ದಿಕ್ಕಿನ ಕಡೆ ಆಸ್ತಿಯನ್ನು ಹನುಮಕ್ಕ ಇವರ ಕಡೆಯಿಂದ ಖರೀದಿಸಿದ್ದಾರೆ. ವಂಟಗೋಡಿ ರುದ್ರಪ್ಪನವರು ಖರೀದಿ ಮಾಡಿದ ಪ್ಲಾಟಿನ ಚಕ್ಕುಬಂದಿ ಪೂಃ ತೋಟಮ್ಮ, ಪಃ ಕೊಟ್ರಯ್ಯ, ಉಃ

ಪೂಜಾರಿ ಗಿರಿಯಮ್ಮ ಇವರ ಹೊಲ ಹಾಗೂ ದಃ ಪಂಪಣ್ಣ ಇವರ ಹೊಲ ಇರುತ್ತದೆ. ಸದರಿ ಚಕ್ಕುಬಂದಿ ಮಧ್ಯದಲ್ಲಿರುವ ಆಸ್ತಿಯನ್ನು ವಂಟಗೋಡಿ ರುದ್ರಪ್ಪ ಖರೀದಿ ಮಾಡಿದ ಆಸ್ತಿಯಲ್ಲವೆಂದರೆ ಸರಿಯಲ್ಲ. ತೋಟಮ್ಮ ಯಾವ ಸರ್ವೆ ನಂಬರಿನಲ್ಲಿ ಆಸ್ತಿ ಖರೀದಿಸಿದ್ದಾಳೆನ್ನುವುದು ನನಗೆ ಗೊತ್ತಿಲ್ಲ. ತೋಟಮ್ಮ ಮತ್ತು ಕಡ್ಲೆಮ್ಮ ಒಬ್ಬರಿಗೊಬ್ಬರು ಸಂಬಂಧಿಕರಲ್ಲ. ಕಡ್ಲೆಮ್ಮ ಮತ್ತು ತೋಟಮ್ಮ ಇವರು ಅವರವರ ಪ್ಲಾಟಿನಲ್ಲಿ ಅವರೇ ವಾಸವಾಗಿದ್ದಾರೆಂದರೆ ಸಾಕ್ಷಿಯ ಅದಲಿ ಬದಲಿ ಮಾಡಿಕೊಂಡಿದ್ದಾರೆನ್ನುತ್ತಾರೆ. ಅವರು ಯಾವ ಕಾರಣಕ್ಕೆ ಅದಲು ಬದಲಿ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯು ಅವರ ಇಚ್ಛೆ ಪ್ರಕಾರ ಮಾಡಿಕೊಂಡಿರುತ್ತಾರೆನ್ನುತ್ತಾರೆ. ಆ ಬಗ್ಗೆ ಯಾವುದೇ ದಾಖಲೆಯಾಗಿಲ್ಲ. ಆ ರೀತಿ ಯಾವುದೇ ಅದಲು ಬದಲು ಮಾಡಿಕೊಳ್ಳಲು ಬರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ತಂದೆ ವಂಟಗೋಡಿ ರುದ್ರಪ್ಪ ಇವರು ಮೂರು ಖರೀದಿ ಪತ್ರಕ್ಕೆ ಸಹಿ ಮಾಡಿದ್ದಾರೆ. ಆಗ ನನಗೆ ವಯಸ್ಸು 35-40 ವರ್ಷ ವಯಸ್ಸು ಇತ್ತು. ಹನುಮಕ್ಕ ಇವರು ಯಾವುದೇ ರೀತಿಯ ಖರೀದಿ ಪತ್ರಗಳನ್ನು ಬರೆದುಕೊಟ್ಟಿಲ್ಲ ಅವುಗಳನ್ನು ನನ್ನ ತಂದೆ, ಅಂಗಡಿ ಕೊಟ್ರಯ್ಯ ಹಾಗೂ ಕಡ್ಲೆಮ್ಮ, ತೋಟಮ್ಮ ಇವರು ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ನಾನು ಹೇಳುವ ಖರೀದಿ ಪತ್ರಗಳು ಕಾನೂನುಬದ್ಧ ದಾಖಲೆಗಳಾಗಿರುವುದಿಲ್ಲ ಅವು ಸೃಷ್ಟಿ ಮಾಡಿಕೊಂಡ ದಾಖಲೆಗಳಿರುತ್ತವೆಂದರೆ ಸರಿಯಲ್ಲ. ಕೊಟ್ರಗೌಡ ಇವರು ಯಾವ ಸರ್ವೆ ನಂಬರಿನಲ್ಲಿ ಜಮೀನು ಖರೀದಿಮಾಡಿರುತ್ತಾರಂತಾ ನನಗೆ ಹೇಳಲು ಬರುವುದಿಲ್ಲ. ರಾಗಿ ಶಿವಾನಂದಪ್ಪ ಯಾರಿಂದ, ಯಾವ ಸರ್ವೆ ನಂಬರನ್ನು ಖರೀದಿ ಮಾಡಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ಕಡ್ಲೆಮ್ಮ, ಕೊಟ್ರಗೌಡ, ಶಿವಾನಂದಪ್ಪ ಮತ್ತು ತೋಟಮ್ಮ ಇವರು ದಿನಾಂಕಃ12-05-1971 ರಂದು ಖರೀದಿ ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ದಿಃ25-05-1973 ರಲ್ಲಿ 2 ಖರೀದಿ ಪತ್ರಗಳನ್ನು ನನ್ನ ತಂದೆ ಮತ್ತು ಇತರರು ಸೇರಿ ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಖರೀದಿ ಸಮಯದಲ್ಲಿ ದಾಖಲೆಗಳು ಯಾರ ಹೆಸರಿನಲ್ಲಿದ್ದವೆಂದು ನಾನು ನೋಡಿಲ್ಲ.

ಪ್ರತಿವಾದಿ, ಕೋಗಳಿ ರುದ್ರಮ್ಮ, ವಂಟಗೋಡಿ ವೀರಣ್ಣ, ಗುರುಸಿದ್ದಪ್ಪ, ಗುರುಸಿದ್ದಯ್ಯ ಹಾಗೂ ಜಾಣ ರಾಘವೇಂದ್ರ ಇವರು 1 ಎಕರೆ 3 ಸೆಂಟ್ಸ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದು ಆ ಜಮೀನು ವಾದಿಯ ಹೆಸರಿನಲ್ಲಿ ದಾಖಲಿದೆ ಎಂದರೆ ನನಗೆ ಗೊತ್ತಿಲ್ಲ. ಹನುಮಕ್ಕ ಇವರು ಮೇಲ್ಕಂಡವರಿಗೆ ಜಮೀನನ್ನು ಮಾರಾಟ ಮಾಡಿರುತ್ತಾಳೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ನನಗೆ ಪ್ರತಿವಾದಿ ಕರೆದುಕೊಂಡು

ಬಂದಿದ್ದಾನೆ. ನಾನು ಮತ್ತು ಪ್ರತಿವಾದಿ ಒಬ್ಬರಿಗೊಬ್ಬರು ಚೆನ್ನಾಗಿದ್ದೇವೆಂದರೆ ಸರಿ. ನನ್ನ ತಂದೆಯವರು ಖರೀದಿ ಪತ್ರಗಳಿಗೆ ಸಹಿ ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ ಆದರೆ ಸದರಿ ಪತ್ರದಲ್ಲಿರುವ ನನ್ನ ತಂದೆಯ ಸಹಿಗಳು ಇರುತ್ತವಂತಾ ನಾನು ಗುರುತಿಸಬಲ್ಲೆ. ಯಾವ ಆಧಾರದ ಮೇಲೆ ಸದರಿ ಸಹಿಗಳು ನಿಮ್ಮ ತಂದೆಯವರದು ಅಂತಾ ಹೇಳುತ್ತೀರಿ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಮನೆಯಲ್ಲಿ ಒಂದು ದಾಖಲೆಗೆ ಸಹಿ ಮಾಡಿರುವುದನ್ನು ನಾನು ನೋಡಿದ್ದೆ ಆ ಕಾರಣದಿಂದಾಗಿ ಸದರಿ ಸಹಿಯನ್ನು ಗುರುತಿಸುತ್ತೇನೆ ಎನ್ನುತ್ತಾರೆ. ನಾನು ಹೇಳಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ನನ್ನ ತಂದೆಯವರ ಸಹಿಯನ್ನು ಗುರುತಿಸುತ್ತೇನಂತಾ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಆತ್ಮೀಯನಾಗಿರುವುದರಿಂದ ಅವನಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯನ್ನು ವಾದಿಯಾಗಲೀ ಅಥವಾ ಅವರ ತಾಯಿಯಾಗಲೀ ಯಾರಿಗೂ ಮಾರಾಟ ಮಾಡಿರುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ